**ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ,**
**ಪೀಠಾಸೀನ ಕೊಳ್ಳೇಗಾಲ**

**SPL.C. 5053 /2025**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಶೇಷಣ್ಣ.ಎನ್ | **ಪ್ರಮಾಣ ವಚನ ಭೋಧಿಸಿದ ದಿನಾಂಕ** |
| **ತಂದೆ ಹೆಸರು** | : | ನಾಗರಾಜು | **09.01.2026** |
| **ವಯಸ್ಸು** | : | 40 ವರ್ಷ | |
| **ವೃತ್ತಿ** | : | ಕಂದಾಯ ನಿರೀಕ್ಷಕರು, ಹನೂರು | **ಫ್ರಾ.ಸಾಃ 05** |
| **ವಾಸ ಸ್ಥಳ** | : | ಹನೂರು | **ಚಾ.ಸಾಃ 12** |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ–**

**ನಾನು ಕಳೆದ 7 ವರ್ಷಗಳಿಂದ ಕಸಬಾ ಹೋಬಳಿ, ಹನೂರು ತಾಲ್ಲೂಕಿನಲ್ಲಿ ರಿಂದ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.**

ನನಗೆ ಚಾಸಾ 13 ಗೊತ್ತು. ದಿಃ 05.06.2025 ರಂದು ಹನೂರು ತಾಲ್ಲೂಕಿನ ತಹಶೀಲ್ದಾರ್ ರವರ ಆದೇಶದಂತೆ ನಾನು ಮತ್ತು ಚಾಸಾ 13 ರವರು ಚಾಸಾ 36 ರವರು ನಡೆಸಿದ ಸ್ಥಳ ಮಹಜರ್ ಸಮಯದಲ್ಲಿ ಹಾಜರಿದ್ದೆವು. ಸದರಿ ಸ್ಥಳವು ಉದ್ದನೂರು ಗ್ರಾಮದ ಆರೋಪಿಗೆ ಸೇರಿದ ಜಮೀನಾಗಿರುತ್ತದೆ. ಚಾಸಾ 36 ರವರು ಸದರಿ ಸ್ಥಳದಲ್ಲಿ ಒಬ್ಬ ವ್ಯಕ್ತಿ ವಿದ್ಯುತ್ ಸಂಪರ್ಕದಿಂದ ಮೃತಪಟ್ಟಿರುತ್ತಾನೆ ಎಂದು ತಿಳಿಸಿರುತ್ತಾರೆ. ನಾವು ಸ್ಥಳವನ್ನು ಪರಿಶೀಲಿಸಿದಾಗ ಆರೋಪಿಯು ಪಕ್ಕದ ಜಮೀನಿನ ಸ.ನಂ. 30/2 ರಿಂದ ವಿದ್ಯುತ್ ಸಂಪರ್ಕವನ್ನು ತನ್ನ ಜಮೀನಿನ ಕೊಳವೆ ಬಾವಿಗೆ ಪಡೆದುಕೊಂಡಿದ್ದನು. ಆರೋಪಿಯು ತನ್ನ ಜಮೀನಿಗೆ ತಂತಿ ಬೇಲಿ ಹಾಕಿದ್ದನು. ಈಗ ತೋರಿಸುತ್ತಿರುವ ಮಹಜರ್ ನಲ್ಲಿ ನನ್ನ ಸಹಿ ಇರುತ್ತದೆ. ಮಹಜರ್ ಅನ್ನು ನಿಪಿ 2 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿಯ

ಸಹಿಯನ್ನು ನಿಪಿ 2(ಬಿ) ಎಂದು ಗುರುತಿಸಲಾಯಿತು. ತನಿಖಾಧಿಕಾರಿಗಳು ಮಹಜರ್ ಸಮಯದಲ್ಲಿ ಆರೋಪಿಯು ವಿದ್ಯುತ್ ಸಂಪರ್ಕ ಪಡೆಯಲು ಬಳಸಿದ ತಂತಿಗಳನ್ನು ಅಮಾನತ್ತುಪಡಿಸಿಕೊಂಡರು. ವಿದ್ಯುತ್ ತಂತಿಗಳನ್ನು ಈಗಾಗಲೇ ಮು.ಮಾ 1 ಮತ್ತು 2 ಎಂದು ಗುರುತಿಸಲಾಗಿರುತ್ತದೆ. ಭಾವಚಿತ್ರಗಳನ್ನು ನಿಪಿ 3 ರಿಂದ 9 ಎಂದು ಈಗಾಗಲೇ ಗುರುತಿಸಲಾಗಿರುತ್ತದೆ.

**ಪಾಟೀ ಸವಾಲುಃ- ಶ್ರೀ ಪಿ ಕೆ ಎಸ್ ವಕೀಲರಿಂದಃ**

ತಹಶೀಲ್ದಾರ್ ರವರು ಮಹಜರ್ ಗೆ ಸಹಕರಿಸಲು ಮೌಖಿಕ ಆದೇಶ ಮಾಡಿರುತ್ತಾರೆ. ಬರವಣಿಗೆ ಆದೇಶ ಮಾಡಿರುವುದಿಲ್ಲ. ನಾನು ಮಹಜರ್ ಸ್ಥಳಕ್ಕೆ ಭೇಟಿ ನೀಡುವ ಮೊದಲು ಕಛೇರಿ ಕಡತದಲ್ಲಿ ನಮೂದು ಮಾಡಿರುವುದಿಲ್ಲ. ಪೊಲೀಸರು ನನ್ನಿಂದ ಜಮೀನಿನ ದಾಖಲಾತಿಗಳನ್ನು ಪಡೆದಿರುವುದಿಲ್ಲ. ಸ.ನಂ. 33/ಎ2 ಆರೋಪಿ ಮತ್ತು ಕೆಂಪಯ್ಯ ಎಂಬುವವರ ಜಂಟಿ ಹೆಸರಿನಲ್ಲಿರುತ್ತದೆ. ಸ.ನಂ. 31/ಎ2 ಆರೋಪಿ, ಕುನ್ನಮಾದಯ್ಯ ಮತ್ತು ಚಿಕ್ಕತಾಯಮ್ಮ ಎಂಬುವವರ ಜಂಟಿ ಹೆಸರಿನಲ್ಲಿರುತ್ತದೆ. ಯಾರು ಯಾರು ವ್ಯಕ್ತಿಗಳು ಯಾವ ಯಾವ ಭಾಗದಲ್ಲಿ ವ್ಯವಸಾಯ ಮಾಡುತ್ತಿದ್ದಾರೆ ಎಂಬುದಕ್ಕೆ ನಕಾಶೆ ಇರುವುದಿಲ್ಲ. ಕೊಳವೆ ಯಾರಿಗೆ ಸೇರಿದ ಜಮೀನಿನಲ್ಲಿ ಇತ್ತು ಎಂಬುದಕ್ಕೆ ನಾನು ವರದಿ ಕೊಟ್ಟಿರುವುದಿಲ್ಲ. ಪೊಲೀಸರು ಸ್ಥಳದಲ್ಲಿ ಯಾವುದೇ ಮಹಜರ್ ಅನ್ನು ಬರೆದಿಲ್ಲ, ಮಹಜರ್ ಗೆ ನಾನು ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಕೃತ್ಯ ಸ್ಥಳಕ್ಕೆ ಭೇಟಿ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ, ಪೀಠಾಸೀನ ಕೊಳ್ಳೇಗಾಲ